**OS- 65/2016 D.W.2**

ದಿನಾಂಕ 27.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲು ಃ</u>** ವಾದಿಯ ಪರ ವಕೀಲರಿಂದ ಃ-

ನನ್ನ ತಂದೆ ಮೂಲತಃ ಕಡೂರಿನ ಮಂಗೇನಹಳ್ಳಿ ಗ್ರಾಮದವರು. ಮಂಗೇನಹಳ್ಳಿ ಮತ್ತು ಕಂಬೇನಹಳ್ಳಿ ಗ್ರಾಮದಲ್ಲಿ ನನ್ನ ತಂದೆಗೆ ಪಿತ್ರಾರ್ಜಿತ ಆಸ್ತಿ ಇದ್ದವು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡಾಗ ಅವರಿಗೆ 80 ವರ್ಷಕ್ಕಿಂತಾ ಜಾಸ್ತಿ ವಯಸ್ಸಾಗಿತ್ತು. ನನ್ನ ತಂದೆ ಸಾಯುವ ಮುಂಚೆ ಮಣಿಪಾಲ್ ಆಸ್ಪತ್ರೆ ಮತ್ತು ಶಿವಮೊಗ್ಗದ ಮಗ್ಗಾನ್ ಆಸ್ಪತ್ರೆಯಲ್ಲಿ ಪಾರ್ಶ್ವವಾಯುವಿಗೆ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವಲ್ಪ ಮಂಡಿ ನೋವು ಇತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಅವರಿಗೆ ಸಂಪೂರ್ಣ ಆರೋಗ್ಯ ಹದಗೆಟ್ಟಿದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಜೀವಂತ ಇರುವಾಗ ಎಲ್ಲಾ ಮಕ್ಕಳ ಬಳಿ ಪ್ರೀತಿ ವಿಶ್ವಾಸದಿಂದ ಇದ್ದರು ಎಂದರೆ ಸರಿ. ನನ್ನ ತಂದೆ ಸಾಯುವ ಮುಂಚೆ 3 ನೇ ಪ್ರತಿವಾದಿಯ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ಅವರು ನನ್ನ ಬಳಿಯೇ ವಾಸವಿದ್ದು ಅವರಿಗೆ ಚಿಕಿತ್ಸೆಗಾಗಿ ತರೀಕೆರೆಗೆ ಕರೆದುಕೊಂಡು ಬಂದಾಗ 3 ನೇ ಪ್ರತಿವಾದಿಯ ಮನೆಗೆ ಕರೆದುಕೊಂಡು ಹೋಗುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ನನ್ನ ತಂದೆಗೆ ಚಿಕಿತ್ಸೆ ಕೊಡಿಸುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. 3 ನೇ ಪ್ರತಿವಾದಿಯು ಅವರ ತಂದೆಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿ ನಾನೇ ಚಿಕಿತ್ಸೆ ಕೊಡಿಸಿದ್ದು ಅವರು ದಾಖಲೆಗಳನ್ನು ಮಾತ್ರ ಹಾಜರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಚಿಕಿತ್ಸೆಯ ವೆಚ್ಚವನ್ನು 3 ನೇ ಪ್ರತಿವಾದಿ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಸರ್ಕಾರಿ ನೌಕರರು ಎಂದರೆ ಸರಿ. ನಾವು ಸರ್ಕಾರಿ ನೌಕರರಾದ ಕಾರಣ ನನ್ನ ತಂದೆಯ ಆಗುಹೋಗುಗಳನ್ನು 3 ನೇ ಪ್ರತಿವಾದಿ 1 ನೇ ಪ್ರತಿವಾದಿ ಮತ್ತು ಇತರೇ ಸಹೋದರರು ನೋಡುತ್ತಿದ್ದು ನಾನು ಅವರ ಆರೈಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಾಪಣ್ಣ ನನ್ನ ಚಿಕ್ಕಪ್ಪ ಎಂದರೆ ಸರಿ. ಅವರು ಕಡೂರಿನಲ್ಲಿ ವಾಸವಿದ್ದರು ಮತ್ತು ಅವರಿಗೆ ಮಕ್ಕಳು ಇರುತ್ತಾರೆ ಎಂದರೆ

ಸರಿ. ಮಂಗೇನಹಳ್ಳಿ ಮತ್ತು ಕಂಬೇನಹಳ್ಳಿಯಲ್ಲಿ ಇದ್ದಂತಹ ಪಿತ್ರಾರ್ಜಿತ ಆಸ್ತಿಗಳನ್ನು ನನ್ನ ತಂದೆ ನನ್ನ ಚಿಕ್ಕಪ್ಪನಿಗೆ ವಹಿಸಿಕೊಟ್ಟು ಹಣವನ್ನು ಪಡೆದು ಬಂದು ದೋರನಾಳು ಗ್ರಾಮದಲ್ಲಿ ವಾಸ ಮಾಡಲು ಆರಂಭಿಸಿರುತ್ತಾರೆ ಎಂದರೆ ಸರಿಯಲ್ಲ.  ಸದರಿ ವಿಚಾರದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಹಣದಿಂದಲೇ ನನ್ನ ತಂದೆ 1 ನೇ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೂ ಯಾವುದೇ ವಿಭಾಗ ಆಗಿರುದಿಲ್ಲ ಎಂದರೆ ಸಾಕ್ಷಿ ವಿಲ್ ಅನ್ನು ಮಾಡಿರುವುದು ವಿಭಾಗ ಎಂದು ನುಡಿಯುತ್ತಾರೆ. ನಾವು ಮೌಖಿಕವಾಗಿ ನನ್ನ ಸಹೋದರರನ್ನು ನನ್ನ ತಂದೆ ವಿಭಾಗಕ್ಕಾಗಿ ಕರೆದಿರುತ್ತಾರೆ ಆದರೆ ಅವರು ಬಂದಿರುವುದಿಲ್ಲ. ನನ್ನ ತಂದೆಯ ಜೀವಿತಾವಧಿಯಲ್ಲಿ ಯಾವತ್ತು ಸಹ ವಿಭಾಗಕ್ಕಾಗಿ ನನ್ನ ಸಹೋದರರನ್ನು ಕರೆದಿರುವುದಿಲ್ಲ ಮತ್ತು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

2 ನೇ ದಾವಾ ಆಸ್ತಿಯಲ್ಲಿ ನನ್ನ ತಂದೆ ವಾಸವಿದ್ದರು ಎಂದರೆ ಸರಿ. ಸದರಿ ಆಸ್ತಿಯ ಖಾತೆ ನನ್ನ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸಾಕ್ಷಿ ನನಗೆ 1976 ರಲ್ಲಿ ಮಂಜೂರಾಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ 1976 ರಲ್ಲಿ 20 ರಿಂದ 22 ವರ್ಷ ವಯಸ್ಸು ಇರಬಹುದು. ಮಂಜೂರಾದ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿರುತ್ತೇನೆ. 2 ನೇ ದಾವಾ ಆಸ್ತಿಯಲ್ಲಿ ನನ್ನ ತಂದೆ ಧೀರ್ಘಾಕಾಲದಿಂದ ವಾಸವಿದ್ದು ನಾನು ತಪ್ಪು ಮಾಹಿತಿ ನೀಡಿ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ದಾವಾ ಆಸ್ತಿಯ ವಿದ್ಯುತ್ ಬಿಲ್ ಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಸದರಿ ಆಸ್ತಿ ಮಂಜೂರಾತಿಯದಾಗ 18 ವರ್ಷ ಇದ್ದು ನಾನು 20 ರಿಂದ 20 ವರ್ಷ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈಗಲೂ ಸಹ 3 ನೇ ಪ್ರತಿವಾದಿ 2 ನೇ ದಾವಾ ಆಸ್ತಿಗೆ ಕಂದಾಯ ಪಾವತಿ ಮಾಡುತ್ತಾ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

1 ನೇ ದಾವಾ ಆಸ್ತಿಯಲ್ಲಿ ರಾಗಿ ಮತ್ತು ಹುರುಳಿ ಬೆಳೆಯುತ್ತೇವೆ. 1 ನೇ ದಾವಾ ಆಸ್ತಿಯ ಆದಾಯದಿಂದ ನಾನು 2 ರಿಂದ 7 ನೇ ದಾವಾ ಆಸ್ತಿಗಳನ್ನು ಖರೀದಿ ಮಾಡಿರುತ್ತೇನೆ ಎಂದರೆ

ಸರಿಯಲ್ಲ. ನನ್ನ ಹೆಸರಿನಲ್ಲಿ ಬಾರ್ ಲೈಸೆನ್ಸ್ ಇತ್ತು ಎಂದರೆ ಸರಿ. ಸದರಿ ಲೈಸೆನ್ಸ್ ಅನ್ನು ನಾನು ನನಗೆ ಕೆಲಸ ಸಿಕ್ಕ ನಂತರ ಸರೆಂಡರ್ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅದರ ಅವಧಿ 12 ತಿಂಗಳುಗಳಿಗೆ ಇದ್ದು ಆನಂತರ ಅದು ರದ್ದಾಗುವ ಕಾರಣ ಸರೆಂಡರ್ ಮಾಡುವ ಅವಶ್ಯಕತೆ ಬರುವುದಿಲ್ಲ ಎಂದು ನುಡಿಯುತ್ತಾರೆ. ನಾನು 1996 ರಲ್ಲಿ ಕೆಲಸಕ್ಕೆ ಸೇರಿರುತ್ತೇನೆ. ಸದರಿ ಬಾರ್ ಲೈಸೆನ್ಸ್ 1997 ರವರೆಗೂ ಚಾಲ್ತಿಯಲ್ಲಿ ಇತ್ತು ಎಂದರೆ ಸಾಕ್ಷಿ 1994-95 ರವರೆಗೆ ಚಾಲ್ತಿಯಲ್ಲಿ ಇತ್ತು ಎಂದು ನುಡಿಯುತ್ತಾರೆ. ನಾನು 1993 ರಲ್ಲಿ ಸರ್ಕಾರಿ ಹುದ್ದೆಗೆ ಸೇರಿರುತ್ತೇನೆ ಎಂದರೆ ಸಾಕ್ಷಿ ನನ್ನ ಹುದ್ದೆಯು 1996 ಜುಲೈನಿಂದ ರೆಗ್ಯುಲರೈಸ್ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆ ವಿಲ್ ಮಾಡಿದ ನಂತರ 15 ದಿನಗಳ ಒಳಗಾಗಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರು ತೀರಿಕೊಳ್ಳುವ ಸಮಯದಲ್ಲಿ ನಾನು ನನ್ನ ಬಳಿ ಕರೆದುಕೊಂಡು ಬಂದು ಇಟ್ಟುಕೊಂಡು ನಿಡಿ.69 ನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿಯಾದ ಕಾರಣ ಸದರಿ ಆಸ್ತಿಯ ಬಗ್ಗೆ ನಿಡಿ69 ರಂತೆ ಮರಣ ಶಾಸನ ಪ್ರಮಾಣಪತ್ರವನ್ನು ಬರೆದುಕೊಡಲು ನನ್ನ ತಂದೆಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ69 ರಂತೆ ನನಗೆ 3 ಎಕರೆ 30 ಗುಂಟೆ ಜಮೀನು ಬಂದಿದ್ದು ನನ್ನ ಉಳಿದ ಸಹೋದರರಿಗೆ ಕಡಿಮೆ ವಿಸ್ತೀರ್ಣದ ಆಸ್ತಿಯನ್ನು ನೀಡಿರುತ್ತಾರೆ ಎಂದರೆ ಸರಿ. ಆ ರೀತಿ ಬರೆಯುವ ಉದ್ದೇಶ ನನ್ನ ತಂದೆಗೆ ಇರಲಿಲ್ಲ ಮತ್ತು ನನ್ನ ತಂದೆಯನ್ನು ನಾನೇ ಮನೆಗೆ ಕರೆದುಕೊಂಡು ಬಂದು ಅವರ ಅನಾರೋಗ್ಯದ ದುರ್ಲಾಭ ಪಡೆದು ನಿಡಿ69 ರಂತೆ ಸದರಿ ವಿಲ್ ಅನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿ ಇರುವಾಗ ನಿಡಿ69 ರ ಆಧಾರದ ಮೇಲೆ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡು ತರೀಕೆರೆ ಶಿವ ಸಹಕಾರಿ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ ಆಧಾರ ಮಾಡಿ ಸಾಲ ಪಡೆದಿರುತ್ತೇನೆ ಎಂದರೆ ಸರಿ. ನನ್ನ ತಂದೆಗೆ ಎಲ್ಲಾ ಮಕ್ಕಳ ಮೇಲೆ ಸಮನಾದ ಪ್ರೀತಿ ವಿಶ್ವಾಸ ಇದ್ದರೂ ಸಹ ನನ್ನ ತಂದೆಗೆ ಹೇಳದೇ ನಿಡಿ69 ರಂತೆ ವಿಲ್ ಅನ್ನು ಸೃಷ್ಟಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೂ ಸಹ ದಾವಾ ಸ್ವತ್ತುಗಳಲ್ಲಿ ಸಮನಾದ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**OS- 65/2016 D.W.2**

**ಮರು ವಿಚಾರಣೆಃ** ಇರುವುದಿಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

Sd/-

(ಸಂತೋಷ ಕುಮಾರ್ ಪಿ. ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರ.ದ.ನ್ಯಾ.ದಂ.ರವರು,
ತರೀಕೆರೆ.